ಸಾಹಿತ್ಯವೆಂದು ಬೇರೆ ಮಾಡಿ, ಆನೆ ಮೊಲಗಳ ಕಥೆ ಬರೆದು, ನಾವು ಮಕ್ಕಳನ್ನು ವಂಚಿಸುತ್ತಿದ್ದೇವೆಯಲ್ಲವೆ? ಹೀಗೆ ಯೋಚಿಸುತ್ತಾ ಮೊದಲ ಪ್ರೂಫ್ ಓದುತ್ತಿದ್ದಾಗ ಪ್ರಿಯಾ, ನನಗೆ ನಿಂಬೆಚಹಾ ತಯಾರಿಸಿ ತಂದಳು. ಚೂಡಿದಾರ್‌ಗೆ ಬದಲಾಗಿ ಅವಳು ಹಳೆಯ ಸೀರೆಯನ್ನು ಸುತ್ತಿಕೊಂಡಿದ್ದಳು. ನನಗೆ ಅವಳ ಮೇಲೆ ದಿಢೀರ್ ಪ್ರೀತಿ ಉಕ್ಕಿತು. ಮಗಳನ್ನು ಮಡಿಲಿನಲ್ಲಿ ಕೂರಿಸಿದಂತೆ ಅವಳನ್ನು ಕೂರಿಸಿಕೊಂಡೆ. ಪುಸ್ತಕವೆಂಬ ದೊಡ್ಡ ಕನಸು ನನ್ನಲ್ಲಿ ಆವೇಶವನ್ನು ಹುಟ್ಟು ಹಾಕಿತ್ತು. ಮಗಳು ಕೋಪಿಸಿಕೊಂಡು ಹೋಗಿದ್ದುದ್ದರ ನೋವಿತ್ತು. ತಪ್ಪಿತಸ್ಥ ಮನೋಭಾವದಿಂದಲೇ ನಾನು ಮೊದಲ ಪ್ರೂಫ್ ಓದಿ ಮುಗಿಸಿದೆ.

ಪ್ರಿಯಾ ಮತ್ತು ಮಗಳೊಂದಿಗೆ ನಾನು ಪಾಲಯಂ ಸಂತೆಯಲ್ಲಿ ನಿಂತಿದ್ದಾಗ ಪ್ರಕಾಶಕನ ಕರೆ ಬಂತು.

'ಗೆಳೆಯ, ಪುಸ್ತಕ ಈಗ ಪ್ರೆಸ್‌ಗೆ ಹೋಗಿದೆ. ಪೇಪರಿಗೆಲ್ಲ ಈಗ ಬೆಲೆಯೂ ಜಾಸ್ತಿ. ಈಗ ನಾವು ಹೇಗೆ ಲೆಕ್ಕ ಹಾಕಿದರೂ ಇನ್ನೂ ಒಂದ್ಹತ್ತು ಸಾವಿರ ರೂಪಾಯಿಗಳನ್ನು ಹಾಕಿದರೇನೆ ಪುಸ್ತಕ ಪ್ರೆಸ್ಸಿನಿಂದ ಹೊರಬರಲು ಸಾಧ್ಯ.'

ಇನ್ನೂ ಹತ್ತು ಸಾವಿರ ರೂಪಾಯಿಗಳು!

'ಎಲ್ಲಿಗೆ ಹೋಗಲಿ... ಸರಿ ನೋಡ್ತೀನಿ...' ಎಂದು ಹೇಳಿ ಕಾಲ್ ಕಟ್ ಮಾಡಿದೆ. ನನ್ನ ಕೋಪವನ್ನು ಟೊಮೊಟೋ ಆಯ್ಕೆ ಮಾಡುತ್ತಿದ್ದ ಪ್ರಿಯಾಳ ಮೇಲೆ ತೀರಿಸಿಕೊಂಡೆ.

'ನಾನು ನಿನ್ಹತ್ರ ಹೇಳಿರಲಿಲ್ವಾ... ಇದೆಲ್ಲ ಬೇಡಾಂತ'

ತರಕಾರಿ ಅಂಗಡಿಯವನು. ಪ್ರಿಯಾ. ಮಗಳು ವಿಷಯ ಏನೂಂತ ತಿಳಿಯದೆ ನನ್ನ ಕಡೆ ನೋಡಿದರು.



ಪ್ರಿಯಾ ಟೊಮೊಟೋವನ್ನು ಕೊಂಡು, ನನ್ನ ಕೈಹಿಡಿದೆಳುದು ಯಾರೂ ಇಲ್ಲದ ಕಡೆ ಕರೆದುಕೊಂಡು ಹೋದಳು.

'ಪುಸ್ತಕ ಪ್ರೆಸ್ಸಿನಲ್ಲಿದೆ. ಹೊರಬರಬೇಕೆಂದರೆ ಇನ್ನೂ ಹತ್ತು ಸಾವಿರ ರೂಪಾಯಿಗಳು ಬೇಕಂತೆ..' ಪ್ರಿಯಾಳಿಗೆ ನಾನು ಹೇಳಿದಾಗ ಅವಳಿಗೆ ಅಳು ಬಂದು ಬಿಟ್ಟಿತು. ಅವಳು ಆತಂಕದಿಂದ ತತ್ತರಿಸಿದಳು. ಆದರೂ ತೋರಗೊಡಲಿಲ್ಲ.

'ರೀ ಮನೋಜ್ ಅದಕ್ಕೆಲ್ಲ ನೀವು ತಲೆ ಕೆಡಿಸ್ಕೊಬೇಡಿ. ಬೇರೆ ದಾರಿ ಇದೆ. ಮೊದಲು ಮನೆಗೆ ಹೋಗೋಣ..'

ಸಂತೆಯಲ್ಲಿ ಗಟ್ಟಿ ಧ್ವನಿಯಲ್ಲಿ ಪ್ರಿಯಾಳೊಂದಿಗೆ ಕೂಗಾಡಿದ್ದು, ಕೋಪ ಮಾಡಿಕೊಂಡಿದ್ದೆಲ್ಲವನ್ನು ನೆನೆದು ತಪ್ಪಿತಸ್ಥ ಮನೋಭಾವ ಕಾಡಿತು.

ಈ ಪುಸ್ತಕ ನನ್ನ ಪುಟ್ಟ ಸಂತೋಷವನ್ನು ಕಬಳಿಸುತ್ತಿದೆಯೆನಿಸಿತು. ನನಗೆ ಸಂಕಟವಾಯಿತು. ಕಥೆಗಳು... ಕಥೆಗಳು... ಒಮ್ಮೆಗೆ ನನಗೆ ಕಥೆಗಳ ಮೇಲೆ ದ್ವೇಷವುಂಟಾಯಿತು. ಏಕೆ ಜನ ಕಥೆಗಳನ್ನು ಬರೆಯುತ್ತಾರೆ? ಏಕೆ ಓದುಗರಿಂದ ಓದಿಸಿ ಕಂಗಾಲು ಮಾಡುತ್ತಾರೆ. ಪ್ರತಿಯೊಬ್ಬ ಮನುಷ್ಯನ ದುರಂತ ಬದುಕಿನ ಕಥೆ ಹೇಳಬೇಕೆಂದಿದೆಯಾ? ಅಥವಾ ತನ್ನ ಮನಸ್ಸಿನೊಳಗಿನ ದುಗುಡಗಳನ್ನೆಲ್ಲ ದಾಖಲಿಸಿ ಮರೆಯಬೇಕೆಂದಿದೆಯಾ? ಗೊತ್ತಿಲ್ಲ.

ಪ್ರಕಾಶಕ ನನ್ನನ್ನು ಬಳಸುತ್ತಿದ್ದಾನೆಯೇ? ಪ್ರಿಯಾಳ ಮೂವತ್ತು ಸಾವಿರ ಮತ್ತು ಅವಳ ಗೆಳತಿಯಿಂದ ಪಡೆದ ಹತ್ತು ಸಾವಿರ ಸೇರಿ, ಒಟ್ಟು ನಲವತ್ತು ಸಾವಿರ. ಅಷ್ಟೊಂದು ದೊಡ್ಡ ಮೊತ್ತ ಪ್ರಕಾಶಕನ ಅಕೌಂಟ್‌ಗೆ ಜಮೆಯಾಗಿದೆ. ನಮ್ಮ ಮಟ್ಟಿಗೆ ಇದೊಂದು ದೊಡ್ಡ ಮೊತ್ತ. ನನಗೆ ಕಥೆ, ಕಾದಂಬರಿಗಳೇನೂ ಬೇಡವಾಗಿತ್ತು. ಕಥೆಗಳು ಮನುಷ್ಯನ ನೆಮ್ಮದಿಯನ್ನೇ ಹಾಳುಗೆಡುವುತ್ತಿದೆ.

ಸರಳವಾದ, ಆದರೆ ಕಷ್ಟದ ದಿನಗಳಲ್ಲಿ ಸಾಗುತ್ತಿರುವ ನಮ್ಮ ಬದುಕಿಗೆ ಈ ಪುಸ್ತಕ ಕೆಂಡದುಂಡೆಯಾಗಿದೆ. ಜಗತ್ತಿನ ಎಲ್ಲಾ ಪುಸ್ತಕಗಳನ್ನು ಬೆಂಕಿಯಿಂದ ಸುಡಬೇಕೆನಿಸಿತು. ಮನೆಯೊಳಗಿನ ಪುಸ್ತಕಗಳಿಗೆಲ್ಲ ಬೆಂಕಿ ಹಿಡಿದಂತೆ ನಾನು ಕನಸು ಕಂಡೆ. ನಿದ್ರೆಯಿಲ್ಲದ